# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 857 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 13.12.2023 |
| ಉತ್ತರಿಸುವ ಸಚಿವರು | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ರಸ್ತೆಗಳನ್ನು ಉನ್ನತೀಕರಣ, ನಿರ್ವಹಣೆ ಮಾಡುವಾಗ ಅನುಸರಿಸುತ್ತಿರುವ ಮಾನದಂಡ ಮತ್ತು ಆದ್ಯತೆಗಳೇನು; ಅಗತ್ಯಕ್ಕೆ ತಕ್ಕಂತೆಯೇ ಅಥವಾ ಲಭ್ಯ ಅನುದಾನಕ್ಕೆ ತಕ್ಕಂತೆಯೇ; 3 ವರ್ಷಗಳ ಖರ್ಚಿನ ಸಹಿತ ವಿವರ ನೀಡುವುದು; | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿನ ರಸ್ತೆಗಳ ಉನ್ನತೀಕರಣ ಮಾಡುವಾಗ ವಾಹನ ಸಂಚಾರ ಗಣತಿ ಪರಿಗಣಿಸಿ, IRC ಹಾಗೂ ಸರ್ಕಾರದ ಆದೇಶ ಸಂ: ಲೋಇ/615/ಸಿಆರ್‌ಎಂ/2010 ದಿನಾಂಕ:21.04.2010 ರ ಮಾರ್ಗಸೂಚಿಯನ್ವಯ ಉನ್ನತೀಕರಣ ಮಾಡಲಾಗುತ್ತದೆ.<br><br>ರಸ್ತೆ ನಿರ್ವಹಣೆ ಮತ್ತು ಅವುಗಳ ಬಳಕೆಗೆ MORTH ಹಾಗೂ IRC ಮಾನದಂಡಗಳನ್ನು ಅನುಸರಿಸುವುದರೊಂದಿಗೆ ರಸ್ತೆಯ ಮೇಲ್ಮೈ ಸ್ಥಿತಿಗತಿಗಳು ಅಂದರೆ ರಸ್ತೆಯ ಉದ್ದಕ್ಕೂ ಅತಿಯಾದ ಜಂಗಲ ಬೆಳೆದಿರುವಿಕೆ, ರಸ್ತೆ ಅಂಚು (ಸೈಡ್ ಬರ್ಮ) ದುರಸ್ತಿಯ ಅವಶ್ಯಕತೆ, ರಸ್ತೆಯ ಮೇಲೆ ತಗ್ಗು ಗುಂಡಿಗಳು ನಿರ್ಮಾಣವಾಗಿದ್ದರೆ ಅವುಗಳನ್ನು ಮುಚ್ಚಿ ಸರಿಪಡಿಸಿ, ಸಾರ್ವಜನಿಕ ಸುಗಮ ವಾಹನ ಸಂಚಾರಕ್ಕೆ ಆದ್ಯತೆ ನೀಡಲಾಗುತ್ತದೆ. 3 ವರ್ಷಗಳಲ್ಲಿ ಖರ್ಚು ಮಾಡಿದ ವಿವರಗಳನ್ನು ಅನುಬಂಧ-1 ರಲ್ಲಿ ಸಿ.ಡಿ. ರೂಪದಲ್ಲಿ ನೀಡಲಾಗಿದೆ. |
| ಆ | ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ಎಲ್ಲಾ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ಇತರೆ ಯೋಜನೆಯ ರಸ್ತೆಗಳಾದ ನಮ್ಮ ಗ್ರಾಮ ನಮ್ಮ ರಸ್ತೆ ಇತ್ಯಾದಿ ಇತರೆ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ವಹಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಈ ರಸ್ತೆಗಳ ಉನ್ನತೀಕರಣ ಮತ್ತು ವಾರ್ಷಿಕ ನಿರ್ವಹಣೆಗೆ ಖರ್ಚು ಮಾಡಿದ ಮೊತ್ತವೆಷ್ಟು; ಲೋಕೋಪಯೋಗಿ ವೃತ್ತವಾರು ಮತ್ತು ರಸ್ತೆಗಳ ಸಹಿತ ವಿವರ ನೀಡುವುದು; | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿನ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಪ್ರತೀ ವರ್ಷವು ಬಿಡುಗಡೆಯಾಗುವ ಅನುದಾನವನ್ನು ಆಧಾರವಾಗಿಟ್ಟುಕೊಂಡು ರಸ್ತೆಗಳ ಗುಂಡಿ ಮುಚ್ಚುವ ಕಾರ್ಯ, ಜಂಗಲ ಕ್ಲೀಯರೇನ್ಸ್, ಸೈಡ ಬರ್ಮಗಳನ್ನು ಸುಸ್ಥಿಯಲ್ಲಿಡುವುದು, ಅಡ್ಡ ಮೋರಿಗಳನ್ನು ಸ್ವಚ್ಛ ಮಾಡುವುದು, ರಸ್ತೆಗೆ ಅವಶ್ಯಕ ಸುರಕ್ಷತಾ ನಾಮಫಲಕ ಇತ್ಯಾದಿಗಳನ್ನು ಅಳವಡಿಸಿ ಸುಗಮ ವಾಹನ ಸಂಚಾರಕ್ಕೆ ರಸ್ತೆಯನ್ನು ಯೋಗ್ಯವಾಗಿಡಲು ಕ್ರಮವಹಿಸಲಾಗುತ್ತದೆ. ವಾರ್ಷಿಕ ನಿರ್ವಹಣೆಗಾಗಿ 2023-24ನೇ ಸಾಲಿನಲ್ಲಿ ಖರ್ಚು ಮಾಡಿದ ವಿವರಗಳನ್ನು ಅನುಬಂಧ-2 ರಲ್ಲಿ ಸಿ.ಡಿ. ರೂಪದಲ್ಲಿ ನೀಡಲಾಗಿದೆ.<br><br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯಡಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯ ಕಾಮಗಾರಿಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ನಿಯಮಾವಳಿಯಂತೆ ಕೈಗೊಳ್ಳುತ್ತಿದ್ದು, ಇದುವರೆವಿಗೂ ನಾಲ್ಕು ಹಂತಗಳಲ್ಲಿ ಒಟ್ಟು 17230.23 ಕಿ.ಮೀ. ಉದ್ದದ ರಸ್ತೆಗಳನ್ನು ರೂ.9569.43 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿರುತ್ತದೆ. ಈ ರಸ್ತೆಗಳ |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| | | ಉನ್ನತೀಕರಣವನ್ನು ಈ ಇಲಾಖೆಯಿಂದ ಕೈಗೊಳ್ಳುವುದಲ್ಲ. ಕಾಮಗಾರಿಗಳ ಮುಕ್ತಾಯದ ನಂತರ 5 ವರ್ಷಗಳ ವಾರ್ಷಿಕ ನಿರ್ವಹಣೆ ಹಾಗೂ 6ನೇ ವರ್ಷದ ಮರು ಡಾಂಬರೀಕರಣ ನಿರ್ವಹಿಸಿ ನಂತರ ರಸ್ತೆಗಳನ್ನು ಸುಸ್ಥಿತಿಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಕಾಮಗಾರಿಗಳನ್ನು ಹಸ್ತಾಂತರಿಸಲಾಗುತ್ತಿದೆ. ಇದುವರೆವಿಗೂ ಈ ಕಾಮಗಾರಿಗಳ ನಿರ್ವಹಣೆಗೆ ಒಟ್ಟು ರೂ.507.07 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ. |
| ಇ | ರಸ್ತೆಗಳ ನಿರ್ವಹಣೆಯಲ್ಲಿ ಯಾವ ಯಾವ ಕಾಮಗಾರಿಗಳು ಒಳಗೊಂಡಿವೆ: ರಸ್ತೆಯ ಅಂಚು ನಿರ್ವಹಣೆ, ಸುರಕ್ಷಿತ ಸೂಚನಾಫಲಕ ಅಳವಡಿಕೆ, ತಡೆಬೇಲಿ ನಿರ್ವಹಣೆ, ಅಪಾಯಕಾರಿ ಮರ ಹಾಗೂ ಹುಲ್ಲು ಮತ್ತು ಕಲ್ಲು ಗುಡ್ಡಗಳ ತೆರವುಗೊಳಿಸುವಿಕೆ, ಅಪಾಯಕಾರಿ ಕಟ್ಟಡಗಳ ತೆರವು, ರಸ್ತೆ ಅಂಚಿನ ಪ್ರಪಾತ ಸರಿಪಡಿಸುವಿಕೆ, ರಸ್ತೆ ಅಂಚಿನಲ್ಲಿ ವ್ಯಾಪಾರ/ವಹಿವಾಟುಗಳ ನಿಯಂತ್ರಣ, ಇತ್ಯಾದಿಗಳಲ್ಲಿ ಯಾವ ಕಾಮಗಾರಿಗಳನ್ನು/ಕ್ರಮಗಳನ್ನು ಲೋಕೋಪಯೋಗಿ ಇಲಾಖೆ ಮಾಡುತ್ತಿದೆ. (ನಿರ್ವಹಣೆಯ ವೆಚ್ಚ ಸಹಿತ ವಿವರ ನೀಡುವುದು) | ರಸ್ತೆಗಳ ನಿರ್ವಹಣೆಯಲ್ಲಿ ಗುಂಡಿ ಮುಚ್ಚುವುದು, ಜಂಗಲ್ ತೆಗೆಯುವುದು, ರಸ್ತೆ ಬದಿಯ ತೋಳು ಚರಂಡಿಗಳ ನಿರ್ಮಾಣ, ರಸ್ತೆ ಅಂಚು ಹಾಗೂ ತಿರುವುಗಳ ನಿರ್ವಹಣೆ, ಹುಲ್ಲು ಮತ್ತು ಬರ್ಮ್ ಕಟ್ಟಿಂಗ್, ಅಡ್ಡಮೋರಿಗಳಿಗೆ ಬಣ್ಣ ಬಳಿಯುವುದು, ರಸ್ತೆಯ ಅಂಚಿಗೆ ಬಣ್ಣ ಬಳಿಯುವುದು, ಭುಜ ನಿರ್ವಹಣೆ, ರಸ್ತೆ ಅಂಚಿನ ಪ್ರಪಾತಗಳನ್ನು ಗ್ರಾವೆಲ್ ನಿಂದ ಮುಚ್ಚುವುದು, ಕಿ.ಮೀ ಕಲ್ಲುಗಳು ಹಾಗೂ ಹೆಕ್ಟೋಮೀಟರ್ ಕಲ್ಲು ಗಳಿಗೆ ಬಣ್ಣ ಬಳಿಯುವುದು, ರಸ್ತೆ ಸಂಚಾರ ಗಣತಿ ಇತ್ಯಾದಿ ಅಂಶಗಳನ್ನು ರಸ್ತೆ ನಿರ್ವಹಣೆಯಡಿ ಕೈಗೊಳ್ಳಲಾಗುತ್ತಿದೆ.<br><br>ರಸ್ತೆ ಅಭಿವೃದ್ಧಿ ಕಾಮಗಾರಿಗೆ ಲಭ್ಯವಿರುವ ಅನುದಾನದ ಅನುಸಾರ ಸುರಕ್ಷಿತ ಸೂಚನಾ ಫಲಕ ಅಳವಡಿಸಿ ತಡೆಗೋಡೆ ನಿರ್ಮಿಸುವುದು, ಅಪಾಯಕರ ಮರ, ಕಲ್ಲು, ಗುಡ್ಡಗಳ ತೆರವುಗೊಳಿಸುವಿಕೆ ಮಾಡಬೇಕಾಗಿದ್ದಲ್ಲಿ ಅಂದಾಜಿನಲ್ಲಿ ಅಗತ್ಯ ಐಟಂಗಳನ್ನು ಅಳವಡಿಸಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ರಸ್ತೆಗೆ ಅಪಾಯಕಾರಿ ಕಟ್ಟಡಗಳ ತೆರವು ರಸ್ತೆ ಅಂಚಿನಲ್ಲಿ ವ್ಯಾಪಾರ / ವಹಿವಾಟುಗಳ ನಿಯಂತ್ರಣಕ್ಕೆ ವಿಭಾಗ ಕಛೇರಿಗಳಿಂದ ಜಿಲ್ಲಾ ಆಡಳಿತಕ್ಕೆ ವರದಿ ಮಾಡಿ ತೆರವುಗೊಳಿಸಲು ಸಂಬಂಧಿಸಿದ ತಹಶೀಲ್ದಾರ್ ರವರಿಗೆ ಕೋರಿಕೆ ಸಲ್ಲಿಸಲಾಗುತ್ತಿದ್ದು, ಕ್ರಮವಹಿಸಲಾಗುತ್ತಿದೆ. ವಿವರಗಳನ್ನು ಅನುಬಂಧ-3 ರಲ್ಲಿ ಸಿ.ಡಿ. ರೂಪದಲ್ಲಿ ನೀಡಲಾಗಿದೆ. |
| ಈ | ಕರ್ನಾಟಕದ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ರಾಜ್ಯದ ಇತರೆಡೆಗಳಿಗಿಂತ ಹೆಚ್ಚು ಮಳೆ ಬರುತ್ತಿದ್ದು ಈ ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ರಸ್ತೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಏನು ಕ್ರಮ ಕೈಗೊಂಡಿದೆ? (ಕಳೆದ 3 ವರ್ಷಗಳ ವೆಚ್ಚ ಸಹಿತ ನಿರ್ವಹಣಾ ವಿವರಗಳನ್ನು ಈ ಜಿಲ್ಲೆಗಳ ತಾಲ್ಲೂಕುವಾರು ವಿವರ ಒದಗಿಸುವುದು) | ಕರ್ನಾಟಕದ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿಯ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ರಸ್ತೆಗಳನ್ನು ರಸ್ತೆಯ ಸ್ಥಿತಿಗತಿಗನುಗುಣವಾಗಿ ನಿರ್ವಹಣೆ ಮಾಡಿ ಸಾರ್ವಜನಿಕ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದ್ದು, ನಿರ್ವಹಣೆ ವೆಚ್ಚದ ವಿವರಗಳನ್ನು ಅನುಬಂಧ-4 ರಲ್ಲಿ ಸಿ.ಡಿ. ರೂಪದಲ್ಲಿ ನೀಡಲಾಗಿದೆ. |

ಲೋಇ 71 ಸಿಕ್ಯೂಎನ್ 2023(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು



File No. PWD/71/CQN/2023-PWD_COMM_1-PWD SEC (Computer No. 1260062)
Generated from eOffice by SIDDAPPA CHANDRASHEKHAR MARTUR, PWD-SO(COM)-comm1, SECTION OFFICER, PWD SEC